

ಸ್ಮಶಾನದ ಗೇಟಿನಿಂದ ನೇರ ಒಳಕ್ಕೆ ಹೋಗುವ ಮಣ್ಣು ದಾರಿ ಬಿಟ್ಟು ಎಲ್ಲೆಲ್ಲೂ ದೂಳು, ಕಸ, ಕಡ್ಡಿ, ಮುಳ್ಳು, ಪೊದೆ, ಮುರುಕು ಕಲ್ಲು, ಬಿಸಾಕಿ ಒಣಗಿ ಹೋದ ಹೂವಿನ ಹಾರ, ಮುರಿದ ಮಡಕೆ, ನಾಯಿಗಳು ಕಿತ್ತು ಹರಿದ ಹಾಸಿಗೆ, ಚಾಪೆ, ಗಾಳಿ ಬೀಸಿದಾಗ ಉರುಳುವ, ಸರಿದಾಡುವ ಊಟದೆಲೆ, ಚೆಲ್ಲಾಡುವ ಅನ್ನದ ಅಗುಳು, ತೆಂಗಿನ ಚಿಪ್ಪು, ಮಂಡಕ್ಕಿ ಕಾಳು, ಯಾರದೋ ಸಮಾಧಿಯ ಮೇಲೆ ಸುರಿದು ಹೋಗಿ ಇಂಗುತಿದ್ದ ಹಾಲು. ಜೊತೆಗೆ- ಮಣ್ಣು ಸೇರುತಿರುವ ಚಿಕ್ಕಮ್ಮನ ಗುಳಿಯ ಸುತ್ತ ಸೇರಿದ ಮಂಕು ಮುಖದ, ದುಗುಡ ಹೊತ್ತ, ದಣಿದ ಜೀವಂತ ದೇಹಗಳು ಅಲ್ಲಲ್ಲಿ ಚೆದುರಿ. ಯಾರು ಬಂದರು ಯಾರು ಬರಲಿಲ್ಲ, ಏನಾಗಿತ್ತು ಅಂತ ಕೇಳುವ ಹೇಳುವ ಅತೀ ಸಣ್ಣದನಿಯ ಪಿಸುಮಾತು... ಇಲ್ಲಿಂದ ಹೋದರೆ ಸಾಕು, ಈ ಸ್ಮಶಾನವ್ರೋ ಜನ